ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ 13ನೇ ಆಗಸ್ಟ್ 1996 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು:(**ಶ್ರೀ ಚಂದ್ರಶೇಖರ ಮಾಮನಿ**)ಅವರು ಪೀಠವನ್ನು ಅಲಂಕರಿಸಿದ್ದರು.

(ಸದನವು ಬೆಳಿಗ್ಗೆ 11.10ಕ್ಕೆ ಪ್ರಾರಂಭವಾಯಿತು)

ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು

(ವಿರೋಧ ಪಕ್ಷದ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಮುಂದುವರಿಸಿದ್ದರು)

ನಿಲುವಳಿ ಸೂಚನೆ (ಚರ್ಚೆಗೆ ಅನುಮತಿ ಕೋರಿಕೆ)

ಆಲಮಟ್ಟಿ ಜಲಾಶಯದ ಬಗ್ಗೆ ಉದ್ಭವಿಸಿರುವ ಸಮಸ್ಯೆ ಕುರಿತು.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ;

ಉಪಾಧ್ಯಕ್ಷರು : ದಯಮಾಡಿ ಈಗ ಪ್ರಶ್ನೋತ್ತರವನ್ನು ಮುಗಿಸೋಣ. ಬಹಳಷ್ಟು ಜನ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಪ್ರಶ್ನೋತ್ತರ ಮುಗಿದ ಕೂಡಲೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಆಲಮಟ್ಟಿ ಜಲಾಶಯದ ಬಗ್ಗೆ ಉದ್ಭವವಾಗಿರುವಂತಹ ಸಮಸ್ಯೆ, ಅದಕ್ಕೆ 9ಜನರ ತಜ್ಞರ ಸಮಿತಿಯನ್ನು ಕಳುಹಿಸುವುದರ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ದಯಮಾಡಿ ಇದು ಆದ್ಯತೆ ಇರುವುದರಿಂದ, ಅತ್ಯಂತ ಪ್ರಮುಖವಾಗಿರುವುದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡಲು ನೀವು ಅವಕಾಶವನ್ನು ಮಾಡಿಕೊಡಬೇಕು. ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ, ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶವಿದೆ. ನಿನ್ನೆ ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದ್ದರು.....

(ಗೊಂದಲ)

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಬಂದಿಲ್ಲ, ಅವರು ಸಾಯಂಕಾಲ ಬರುತ್ತಾರೆ. ಈಗ ಪ್ರಶ್ನೋತ್ತರವನ್ನು ಮುಗಿಸೋಣ. ಮಾನ್ಯ ಟಿ.ಬಿ. ಜಯಚಂದ್ರರವರು ಪ್ರಶ್ನೆಯನ್ನು ಕೇಳಬೇಕು. ಶ್ರೀ ಅಪ್ಪಚ್ಚುರಂಜನ್, ಶ್ರೀಮತಿ ಬಿ.ಟಿ ಲಲಿತಾನಾಯಕ್‌ರವರೆ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಡುತ್ತಾರೆಂದು ಹೇಳಿ ಅವರು ದೆಹಲಿಗೆ ಹೋಗಿ ಕುಳಿತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಸಾಯಂಕಾಲ ಬರುತ್ತಾರೆಂದು ತಿಳಿಸಿದ್ದಾರೆ. ಈಗ ಮಾನ್ಯ ಪ್ರಕಾಶ್‌ರವರು ಉತ್ತರ ಕೊಡುತ್ತಾರೆ. ತಾವು ಒಂದೆರಡು ನಿಮಿಷಗಳು ಸರ್ಕಾರದ ಪರವಾಗಿ ಅವರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಎಂ.ಸಿ. ನಾಣಯ್ಯ : ಮೊದಲು ಪ್ರಶ್ನೋತ್ತರ ಆಗಲಿ ಆಮೇಲೆ ಮಿಕ್ಕ ವಿಷಯವನ್ನು ಚರ್ಚೆ ಮಾಡಿ.

ಉಪಾಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಒಂದು ವಿನಂತಿ ಏನೆಂದರೆ, ಸದಸ್ಯರುಗಳು ಪ್ರಶ್ನೋತ್ತರವನ್ನು ಬಹಳ ದಿವಸಗಳಿಂದ ನಿರೀಕ್ಷೆ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಸಾಯಂಕಾಲ ಬರುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಹಿತವನ್ನು ಬಲಿಕೊಡಲು ಹೋಗಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ ಮಾನ್ಯ ಮುಖ್ಯಮಂತ್ರಿಯವರ ಬಗ್ಗೆಯೂ ಹೇಳುತ್ತಾರೆ. ದಯಮಾಡಿ ತಾವು ಕೇಳಿ. ತಾವು ವಿರೋಧಪಕ್ಷದ ನಾಯಕರು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಾರೆ ತಾವು ಕುಳಿತುಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ.ಯ ಕೆಲವು ಸದಸ್ಯರುಗಳು, ರೈತ ಸಂಘದ ಸದಸ್ಯರು, ಕಾಂಗ್ರೆಸ್ಸ ಕೆಲವು ಸದಸ್ಯರು ಸದನದ ಬಾವಿಗೆ ಬಂದು ಧರಣಿ ನಡೆಸಿದರು)

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಈಗ ಸರ್ಕಾರದಿಂದ ಏನು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆಂಬುದನ್ನು ಕೇಳುವುದಕ್ಕೆ ತಯಾರು ಇಲ್ಲದಿದ್ದರೆ ಹೇಗೇ? ಈ ಸದನದಲ್ಲಿ, ಈ ವಿಷಯದಲ್ಲಿ ಸರ್ಕಾರ ಯಾವುದೇ ಮುಚ್ಚುಮರೆಯನ್ನು ಮಾಡುವುದಕ್ಕೆ ತಯಾರಿಲ್ಲ ಆಗಿರುವಂತಹ ಬೆಳವಣಿಗೆಯನ್ನು ಕುರಿತಾಗಿ ಮಾತನಾಡುವುದಕ್ಕೆ ಮತ್ತು ಸದನಕ್ಕೆ ಎಲ್ಲಾ ವಿಚಾರಗಳನ್ನು ತಿಳಿಸಲು ಸರ್ಕಾರ ಬದ್ಧವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ಬರದೆ ಇರುವುದಕ್ಕೆ ಅನಿವಾರ್ಯ ಪ್ರಸಂಗವೇನು ಎಂಬುದನ್ನು ನಾವು ತಮಗೆ ಮನವರಿಕೆಯನ್ನು ಮಾಡುತ್ತೇವೆ. ಮೊದಲು ಪ್ರಶ್ನೋತ್ತರ ವೇಳೆಯನ್ನು ನಡೆಸಲು ಅವಕಾಶವನ್ನು ಮಾಡಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಬೆಳಿಗ್ಗೆ ಬಂದು ಹೇಳಿಕೆಯನ್ನು ಕೊಡುತ್ತಾರೆಂದು ಹೇಳಿದರು. ನಿನ್ನೆ ಸದನವನ್ನು ಏಕೆ ಮುಂದೂಡಿದ್ದುದು? ಬೆಳಿಗ್ಗೆ 11.00 ಗಂಟೆಗೆ ಬಂದು ಅವರು ಹೇಳಿಕೆಯನ್ನು ಕೊಡುತ್ತಾರೆಂದು ಮಾನ್ಯ

ಉಪ ಮುಖ್ಯಮಂತ್ರಿಯವರು ಹೇಳಿದ್ದರು. ಈಗ ಉಪ ಮುಖ್ಯಮಂತ್ರಿಯವರು ಎಲ್ಲಿ ಹೋದರು? ಸದನವನ್ನು ಹಗುರವಾಗಿ ತೆಗೆದುಕೊಳ್ಳುತ್ತಿರೇನು?

ಶ್ರೀ ಎಂ.ಪಿ. ಪ್ರಕಾಶ್ : ಸರ್ಕಾರದ ಪರವಾಗಿ ನಾವು ಇದ್ದೇವೆ. ಸರ್ಕಾರದ ಪರವಾಗಿ ನಾವು ಮಾತನಾಡುತ್ತೇವೆ. ಈಗ ಅವರೇ ಬರಬೇಕೆಂಬ ಪ್ರಶ್ನೆ ಇಲ್ಲ. ಅದರ ಬಗ್ಗೆ ನಾವು ಉತ್ತರ ಹೇಳುವುದಕ್ಕೆ ತಯಾರು ಇದ್ದೇವೆ. ಪ್ರಶ್ನೋತ್ತರ ವೇಳೆ ಆದ ಮೇಲೆ ಅದಕ್ಕೆ ಬೇಕಾದಂತಹ ಉತ್ತರವನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ದಯಮಾಡಿ ವಿರೋಧಪಕ್ಷದ ಸದಸ್ಯರುಗಳಿಗೆ ನಾವು ಕೇಳಿಕೊಳ್ಳುವುದೇನೆಂದರೆ ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನು ಬಾಹಿರವಾಗಿರುವಂತಹ ತಜ್ಞರ ಸಮಿತಿಯನ್ನು ಕರ್ನಾಟಕಕ್ಕೆ ಬರುವುದಕ್ಕೆ ಬಿಡುವುದಿಲ್ಲವೆಂದು ಮೊದಲು ತಾವು ಹೇಳಬೇಕು, ಆಮೇಲೆ ಇಲ್ಲಿಯ ಕಾರ್ಯಕಲಾಪ. ಅವರು ಬಂದರೆ ನಾವು ಬಾಯ್ ಕಾಟ್ ಮಾಡುತ್ತೇವೆ. ನಾವು ಛೀಮಾರಿ ಹಾಕಿ ಕಳುಹಿಸುತ್ತೇವೆ. ಸರ್ಕಾರಕ್ಕೆ ಸ್ವಾಭಿಮಾನವಿದ್ದರೆ ನೀವೇ ಅವರು ಬರದಂತೆ ನೋಡಿಕೊಳ್ಳಿ. ಯಾರು ಅವರು ಬರುವುದಕ್ಕೆ ಅವರಿಗೆ ಲೀಗಲ್ ಸ್ಯಾಂಕ್ಷಿಟ ಏನಿದೆ?

ಶ್ರೀ ಧರ್ಮ್‌ಸಿಂಗ್ : ಮುಖ್ಯಮಂತ್ರಿಯವರು ಯಾವಾಗ ಬರುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಬಜಾವತ್ ಆಯೋಗದ ತೀರ್ಪನ್ನು ಜಾರಿಗೆ ತರುವುದಕ್ಕೆ ಹೋಗಿದ್ದಾರೋ? ಅಥವಾ ಮಾನ್ಯ ದೇವೇಗೌಡರನ್ನು ಬಚಾವ್ ಮಾಡುವುದಕ್ಕೆ ದೆಹಲಿಗೆ ಹೋಗಿದ್ದಾರೋ? ಏತಕ್ಕೆ ಹೋಗಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು : ಎಂ.ಪಿ. ಪ್ರಕಾಶ್‌ರವರು ಸರ್ಕಾರದ ಪರವಾಗಿ ಹೇಳುತ್ತಾರೆ ಕೇಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರೊಬ್ಬರು : ಇಲ್ಲಿ ದೇವೇಗೌಡರ ಸುದ್ದಿ ಅವಶ್ಯಕತೆ ಇಲ್ಲ. ಇಲ್ಲಿ ದೇವೇಗೌಡರ ಬಗ್ಗೆ ಏತಕ್ಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆಂಧ್ರಪ್ರದೇಶದ ಮುಖ್ಯಮಂತ್ರಿ ಬೆದರಿಕೆ ಹಾಕಿದರೆ, ಅವರನ್ನು ಮಣಿಸುವುದಕ್ಕೋಸ್ಕರ ಈ ರಾಜ್ಯದ ಹಿತವನ್ನು ಮಾರುವುದಕ್ಕೆ ಹೋಗಿದ್ದಾರೇನು ಈ ಮುಖ್ಯಮಂತ್ರಿ? ಇವರು ಏತಕ್ಕೆ ಹೋಗಿದ್ದಾರೆ?

(ಗೊಂದಲ)

ಉಪಾಧ್ಯಕ್ಷರು : ವಿರೋಧಪಕ್ಷದ ನಾಯಕರು ಮಾತನ್ನಾಡುವಾಗ ನಿಮ್ಮ ಸದಸ್ಯರಿಗೆ ಸುಮ್ಮನೆ ಇರುವುದಕ್ಕೆ ಹೇಳಿ. ತಾವು ಈಗ ಮಾತನಾಡಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಉಪಾಧ್ಯಕ್ಷರೆ ಕೇಳಿ, ನಿನ್ನೆ ಇದೇ ಸದನದಲ್ಲಿ ಅಧ್ಯಕ್ಷರು, ತಾವು ಅಪ್ಪಣೆಯನ್ನು ಕೊಡಿಸಿದ್ದೀರಿ. ಅದೇನೆಂದರೆ,

ಮಾನ್ಯ ಮುಖ್ಯಮಂತ್ರಿಗಳು ಬಂದು ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತಾರೆ, ಅದಕ್ಕಾಗಿ ಬೆಳಿಗ್ಗೆ 9.30 ಗಂಟೆಗೆ ಇರುವ ಸೆಷನ್ ಅನ್ನು 11.00 ಗಂಟೆಗೆ ಮುಂದೂಡಿದ್ದೀರಿ. ಇವತ್ತು ಅವರು ಪುನಃ ದೆಹಲಿಯಲ್ಲಿ ಕುಳಿತು, ಇವತ್ತಿನ ದಿವಸ ಮನಿ ಬಿಲ್ ಅನ್ನು ಪಾಸ್ ಮಾಡಿಕೊಳ್ಳತಕ್ಕದ್ದು. ಅನೇಕ ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳತಕ್ಕದ್ದು, 40 ಬೇಡಿಕೆಗಳನ್ನು ಪಾಸ್ ಮಾಡಿಕೊಳ್ಳತಕ್ಕದ್ದು, ಇವತ್ತು ಈ ಸದನದ ಮುಂದೆ ಇಟ್ಟುಕೊಂಡು, ಪದೇ ಪದೇ ನಾವು ಕೇಳಿದಾಗ, ನೀವು ಈ ಸದನದ ಕಾಲಾವಕಾಶವನ್ನು ಹಾಳು ಮಾಡುತ್ತಿದ್ದೀರಿ, ದೇಶದ ಹಣವನ್ನು ಹಾಳು ಮಾಡುತ್ತಿದ್ದೀರಿ ಎಂದು ಹೇಳುತ್ತೀರಿ. ಇವತ್ತು ನೀವು ಮೂರು ದಿವಸ ಅಲ್ಲಿ ಕುಳಿತು ಯಾರ ಹಣವನ್ನು ಹಾಳು ಮಾಡುತ್ತಿದ್ದೀರಿ? ಅದು ಯಾರ ದುಡ್ಡು? ಮೂರು ದಿವಸಗಳಿಂದ ಒಂದು ರಾಜಕೀಯ ಮಾಡುವುದಕೋಸ್ಕರ, ಕುರ್ಚಿಯನ್ನು ಉಳಿಸುವುದಕೋಸ್ಕರ ನೀವು ಅಲ್ಲಿ ಕುಳಿತು, ಇವತ್ತಿನ ದಿವಸ ಈ ಸದನಕ್ಕೆ ಅವಮಾನ ಮಾಡತಕ್ಕದ್ದು, ಈ ರಾಜ್ಯಕ್ಕೆ ದ್ರೋಹ ಮಾಡತಕ್ಕದ್ದು, ಜನರಿಗೆ ದ್ರೋಹ ಮಾಡತಕ್ಕದ್ದು ಮಾಡುತ್ತಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರೊಬ್ಬರು : ಅವಮಾನ ಏನೂ ಆಗಿಲ್ಲ.

ಉಪಾಧ್ಯಕ್ಷರು : ಅವರು ಸರ್ಕಾರದ ಪರವಾಗಿ ಸ್ವಲ್ಪ ಏನು ಹೇಳುತ್ತಾರೆ ಎನ್ನುವುದನ್ನು ಕೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಸದನ ನಡೆಯುವಾಗ ಒಬ್ಬ ಮುಖ್ಯಮಂತ್ರಿಗಳು, ನೀರಾವರಿ ಮಂತ್ರಿಗಳು ಅಲ್ಲಿ ಕುಳಿತುಕೊಳ್ಳುತ್ತಾರಾ? ಅಲ್ಲಿ ನಿದ್ದೆ ಮಾಡುತ್ತಾರೋ?

ಉಪಾಧ್ಯಕ್ಷರು : ಅವರು ಸರ್ಕಾರದ ಪರವಾಗಿ ಏನು ಹೇಳುತ್ತಾರೆನ್ನುವುದನ್ನು ಕೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನು ಇವರೆಲ್ಲಾ ಆಂಧ್ರಪ್ರದೇಶದ ಗುಲಾಮರಾ? ಇವತ್ತು ಚಂದ್ರಬಾಬು ನಾಯ್ಡುರವರ ಗುಲಾಮರಾಗಿ ಅಲ್ಲಿ ಹೋಗಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಲಾಗಿದೆ, ಪುನಃ ಒಂದು ಗಂಟೆಯ ನಂತರ ಸದನವು ಸೇರುವುದು.

(ಸದನವು ಬೆಳಿಗ್ಗೆ 11 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಒಂದು ಗಂಟೆಯ ನಂತರ ಸೇರಲು ನಿಶ್ಚಯಿಸಲಾಯಿತು)

(ಸಭೆಯು 1.00 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ತಮ್ಮ ಪೀಠಕ್ಕೆ ಬಂದರು)

ನಿಲುವಳಿ ಸೂಚನೆ

ಆಲಮಟ್ಟಿ ಜಲಾಶಯದ ಬಗ್ಗೆ ಉದ್ಭವಿಸಿರುವ ಸಮಸ್ಯೆ ಕುರಿತು-ಮುಂದುವರಿದ ಚರ್ಚೆ

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರದ ವ್ಯವಹಾರ, ಈ ರಾಜ್ಯದ ವ್ಯವಹಾರ ಕಾನೂನು ಚೌಕಟ್ಟಿನಲ್ಲಿ ನಡೆಯುತ್ತಿಲ್ಲ ಎನ್ನುವ ಭಾವನೆ ಸಾಮಾನ್ಯ ಜನಗಳಿಗೂ ಕೂಡ ಬರುವುದಕ್ಕೆ ಪ್ರಾರಂಭವಾಗಿದೆ. ಇವತ್ತು ಕೃಷ್ಣಾ ಜಲಾನಯನ ಪ್ರದೇಶದ ವಿಚಾರ, ಅದರಲ್ಲೂ ಆಲಮಟ್ಟಿ ವಿಚಾರದಲ್ಲಿ ಕಾನೂನು ಬದ್ಧವಾಗಿ ನಡೆಯುತ್ತಿಲ್ಲ ಎನ್ನತಕ್ಕಂಥದ್ದು ನಿರ್ವಿವಾದ. ನಿನ್ನೆ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಬಂದ ಕೂಡಲೇ ಒಂದು ಪೇಳಿಕೆಯನ್ನು ಕೊಡಿಸುತ್ತೇನೆ ಎನ್ನತಕ್ಕಂಥ ಅಪ್ಪಣೆಯನ್ನು ತಾವು ಕೊಡಿಸಿದಿರಿ. ಅದೂ ಆಗಿಲ್ಲ. ಈಗ ನಡೆದಿರತಕ್ಕಂಥ ರೀತಿ ನೋಡಿದರೆ ಮೆಲ್ಲಗೆ ಇರುವವರನ್ನು ಮೊಳಕೆಯಲ್ಲಿ ಗುದ್ದಿದರು ಎನ್ನುವ ರೀತಿ ಆಗಿದೆ. ಕರ್ನಾಟಕದವರು ಮೆಲ್ಲಗೆ ಇದ್ದಾರೆ ಅವರನ್ನು ಮೊಳಕೆಯಲ್ಲಿ ಗುದ್ದುವುದು. ಈಗ ಮಾಡಬಾರದ ತಪ್ಪೆಲ್ಲ ಮಾಡಿ Andhra is crying wolf. ಜುರಾಲದಲ್ಲಿ ಬಚಾವತ್ ತೀರ್ಪನ್ನು ವೈಲೇಟ್ ಮಾಡಿದ್ದಾರೆ. ಶ್ರೀ ಶೈಲಂನ ಎಡದಂಡೆ ನಾಲೆ ಮತ್ತು ಬಲದಂಡೆ ನಾಲೆ ಎಕ್ಷೆನ್ಷನ್ ಮಾಡುವಾಗ ಬಚಾವತ್ ತೀರ್ಪನ್ನು ವೈಲೇಟ್ ಮಾಡಿದ್ದಾರೆ. ತೆಲಗುಗಂಗಾ ಅಂತೂ Their plan is to appropriate all the 333 TMC FT of surplus water at fifty percent dependability. Before 2000 years, they want to appropriate.

ಇಷ್ಟೆಲ್ಲಾ ಅಪರಾದ ಮಾಡಿ ಇವತ್ತು ರಾಷ್ಟ್ರದ ಮುಂದೆ ಆಂಧ್ರಪ್ರದೇಶದವರು ಕರ್ನಾಟಕದ ವಿರುದ್ಧ ದೂರು ಹೇಳಿಕೊಂಡು ಹೋಗುತ್ತಿದ್ದಾರೆ. ಈಗ ನಮಗೆ ಬಂದಿರತಕ್ಕಂಥ ಚಿಂತೆ ಏನೆಂದರೆ,

ಸನ್ಮಾನ್ಯ ದೇವೇಗೌಡರು ಈ ವಿಷಯವನ್ನು ತಮ್ಮ ರಾಜಕೀಯ ಸಮಿತಿಗೆ ತೆಗೆದುಕೊಂಡು ಹೋಗಿರುವುದು ಸಹ ಕಾನೂನು ಬಾಹಿರವಾದುದು. ಯಾವ್ಯಾವು ಲೋಯಸ್ಟ್ ರೈಪೇರಿಯನ್ ಸ್ಟೇಟ್ಸ್ ಇದ್ದಾವೆ? ಅದು ತಮಿಳುನಾಡಾಗಲೀ, ವೆಸ್ಟ್ ಬೆಂಗಾಲ್ ಆಗಲೀ, ಅವರ ಪಕ್ಷದ ಪ್ರಾಬಲ್ಯ ಇರತಕ್ಕಂಥ ರಾಜಕೀಯ ಸಮಿತಿ. ಅದು ಅವರ ಪಕ್ಷದ್ದು. ಯಾವ ಪಕ್ಷದ ಸಮಿತಿ ಮಾಡಿದರೂ ಅದು ಕಾನೂನು ಬಾಹಿರ. ಅದನ್ನು ಬಿ.ಜೆ.ಪಿ.ಯವರು ಮಾಡಿದರೂ ಕಾನೂನು ಬಾಹಿರವಾಗುತ್ತದೆ. ಆ ಸಮಿತಿಯವರು ಇನ್ನೊಂದು ಎಕ್ಷರ್ಟ್ಸ್ ಕಮಿಟಿಯನ್ನು ಮಾಡಿದ್ದಾರೆ, ಅದರಲ್ಲಿ ಯಾರು ಇದ್ದಾರೆ? ಲೋಯಸ್ಟ್ ರೈಪೇರಿಯನ್ ಇಂಜಿನೀಯರ್ಸ್. ಬಹುಶಃ ಈ ಕಮಿಟಿಗೂ ಲೀಗಲ್ ಸ್ಟೇಟಸನ್ನು ಕೇಂದ್ರ ಸರ್ಕಾರ ಕೊಟ್ಟರೂ ಕೊಡಬಹುದೆಂದು ನನ್ನ ಅಪ್ರಹೆನ್ಷನ್ ಇದೆ. ಕೇಂದ್ರ ಸರ್ಕಾರ ಒಂದು ಗೌರ್ಮಮೆಂಟ್ ಆರ್ಡರ್ ಇಶ್ಯೂ ಮಾಡಿ ಈ ಸಮಿತಿಯವರು ನೋಡಲಿ ಎಂದು ಹೇಳಿದರೂ ಹೇಳಬಹುದು. ಆದರೂ ಅದು ಕಾನೂನು ಬಾಹಿರವೆಂದು ನಾನು ಹೇಳುತ್ತೇನೆ. ಇದನ್ನು ಏಕೆ ಹೇಳುತ್ತೇನೆಂದರೆ, ರಾಷ್ಟ್ರೀಯ ಜಲನೀತಿ ಮಾಡುವಂಥ ಕಾಲದಲ್ಲಿ 64 ಜನ ಲೋಕ ಸಭಾ ಸದಸ್ಯರುಗಳು ಒಂದು ಮೆಮೊರಾಂಡಮ್‌ನ್ನು ತಯಾರು ಮಾಡಿ ಆಗಿನ ಪ್ರಧಾನಿಯವರಿಗೆ ಕೊಟ್ಟಿದ್ದೆವು. ಆಗ ಆ ಮೆಮೊರಾಂಡಮ್ಮಿ ಲೋಯಸ್ಟ್ ರೈಪೇರಿಯನ್ ಸ್ಟೇಟ್‌ನ ಒಬ್ಬ ಎಂ.ಪಿ.ಯನ್ನೂ ಸೈನ್ ಹಾಕುವುದಕ್ಕೆ ಬಿಡಲಿಲ್ಲ. ತಮಿಳುನಾಡಿನ ಎಂಪಿಗಳು ಸೈನ್ ಹಾಕಲಿಲ್ಲ, ವೆಸ್ಟ್ ಬೆಂಗಾಲ್ ಎಂಪಿಗಳು ಸೈನ್ ಹಾಕಲಿಲ್ಲ. ಅಪ್ಪರ್ ರೈಪೇರಿಯನ್ ಸ್ಟೇಟ್‌ನ ಎಂ.ಪಿ.ಗಳೇ

ಆ ಮೆಮೊರಾಂಡಮ್‌ಗೆ ಸೈನ್ ಹಾಕಿ ರಾಷ್ಟ್ರೀಯ ಜಲನೀತಿ ಆಗಬೇಕೆಂದು ಕೊಡಬೇಕಾದ ಪರಿಸ್ಥಿತಿ ಬಂದಿತ್ತು. ಈ ಲೋಯಸ್ಟ್ರೆ ರೈಪೇರಿಯನ್ ಸ್ಟೇಟ್ಸ್‌ನವರ ಬಗ್ಗೆ ನಮಗೆ ಸಾಕಷ್ಟು ಅನುಮಾನ ಮತ್ತು ಶಂಕೆ ಇದೆ. ಅವರನ್ನು ಒಳಗೊಂಡಂಥ ಅವರ ಕನ್ವೀನರ್ ಷಿಪ್‌ನಲ್ಲಿ ಸಮಿತಿ ಮಾಡತಕ್ಕಂಥಾದ್ದು ಮತ್ತು ಅದಕ್ಕೆ ಲೀಗಲ್ ಸ್ಟೇಟಸ್ ಕೊಟ್ಟರೂ ಸಹ ಅದನ್ನು ರಾಜಕೀಯ ಕಾರಣಕ್ಕಾಗಿಯೇ ಪ್ರಧಾನಿಯವರು ಕೊಟ್ಟಿದ್ದಾರೆ ಎನ್ನುವ ಭಾವನೆ ನಮಗೆ ಬರುತ್ತವೆಂದು ನಾನು ಅನುವಾರ್ಯವಾಗಿ ಹೇಳಬೇಕಾಗುತ್ತದೆ. ಇದರ ಬಗ್ಗೆ ವಿಚಾರ ಮಾಡಲು ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಮೀಟಿಂಗ್ ಕರೆದಿರುವುದು ಸರಿ. ಆದಾದ ಮೇಲೆ ಸೆಂಟ್ರಲ್ ವಾಟರ್ ಕಮಿಷನ್ ಎಕ್ಸ್‌ಪರ್ಟ್ ಸಹಾಯ ತೆಗೆದುಕೊಂಡು ಇದರಲ್ಲಿ ಕರ್ನಾಟಕದವರು ವಯಲೇಟ್ ಮಾಡಿದ್ದಾರೋ ಆಂಧ್ರಪ್ರದೇಶದವರು ವಯಲೇಟ್ ಮಾಡಿದ್ದಾರೋ ಎಂದು ತಿಳಿದುಕೊಳ್ಳಬಹುದಾಗಿತ್ತು. ಆ ಕೆಲಸವನ್ನು ಮಾಡಲಿಲ್ಲ. ಇವತ್ತು ಎಕ್ಸ್‌ಟ್ರಾ ಕಾನ್ಸ್ಟಿಟ್ಯೂಷನಲ್ ಅಥಾರಿಟಿ ಕ್ರಿಯೇಟ್ ಮಾಡಿ ಅವರು ನಮ್ಮ ರಾಜ್ಯದಲ್ಲಿ ಬಂದು ನೋಡುವುದು ಸರಿಯಲ್ಲ. ತೆಲುಗು ಗಂಗಾದಲ್ಲಿ ವಯಲೇಟ್ ಮಾಡಿದ್ದಾರೆ ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ. 1150 ಕ್ಯೂಸೆಕ್ಸ್ ನೀರು ಹೋಗತಕ್ಕಂಥ ಕಾಲುವೆ ಮಾಡುವ ಬದಲಿಗೆ 11,500 ಕ್ಯೂಸೆಕ್ಸ್ ನೀರು ಹೋಗತಕ್ಕಂಥ ನಾಲೆ ತೆಗೆದು ಅದರಿಂದ 200 ದಿನ ನೀರು ತೆಗೆದರೆ 300 ಟಿಎಂಸಿ ಎಫ್ ಟಿಯಷ್ಟು ನೀರು ಉಪಯೋಗಿಸಬಹುದು. ಅಂಥಾ ವಯಲೇಷನ್ ಮಾಡಿದ್ದಾರೆ. with ulterior motive Appropriating all the surplus water,.. ಇದನ್ನು ಕೇಂದ್ರ ಸರ್ಕಾರ ನೋಡಲಿಲ್ಲ, ಇದಕ್ಕೆ ಆಸ್ತೆ ವಹಿಸಲಿಲ್ಲ. ಇವತ್ತು ಚಂದ್ರಬಾಬುನಾಯ್ಡು ಅವರ ಮಂತ್ರಿ ಮಂಡಲದಲ್ಲಿರತಕ್ಕಂಥ ಒಬ್ಬ ಮಂತ್ರಿ ಈ ರಾಷ್ಟ್ರದ ಪ್ರಧಾನಿಯವರನ್ನು ಚಾರಿತ್ರ್ಯ ಹೀನರು ಎಂದು ಕರೆದರು. ಇವರಿಗೆ ಹೆದರಿಕೊಂಡು ಕೇಂದ್ರ ಸರ್ಕಾರವು ತನಗೆ ಇಷ್ಟ ಬಂದ ಹಾಗೆ ಲೀಗಲ್ ಆಗಿ ಅಲ್ಲದೆ ಎಕ್ಸ್‌ಟ್ರಾ ಕಾನ್ಸ್ಟಿಟ್ಯೂಷನಲ್ ಆಗಿ ಬಾಡಿ ಕ್ರಿಯೇಟ್ ಮಾಡಿದ್ದಾರೆ. ಇದನ್ನು 4 ಜನ ಚೀಫ್ ಮಿನಿಸ್ಟರ್ ಸೇರಿ ಮಾಡಿರುವುದರಿಂದ ಇದಕ್ಕೆ ಯಾವ ಕಾನ್ಸ್ಟಿಟ್ಯೂಷನಲ್ ಪ್ರಾವಿಷನ್ ಇದೆ? ಅವರು ತರುವುದಕ್ಕೆ ಮತ್ತು ಮಾತನಾಡುವುದಕ್ಕೆ ಯಾವ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಇದೆ? ಆ ನಾಲ್ಕು ಜನ ಮುಖ್ಯಮಂತ್ರಿಗಳು ಸೇರಿ ಕಮಿಟಿ ಮಾಡುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶವಿದೆ? ಇದನ್ನೆಲ್ಲಾ ನೋಡಿಕೊಂಡು ನಾವು ಕಣ್ಣು ಮುಚ್ಚಿಕೊಂಡು ಸುಮ್ಮನೆ ಕೂರುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ.

ಇದರ ವಿರುದ್ಧವಾಗಿ ಮೊದಲನೆ ದಿವಸ ಮಾನ್ಯ ಮುಖ್ಯಮಂತ್ರಿ ಜೆ.ಹೆಚ್. ಪಟೇಲರು ಕೊಟ್ಟ ಹೇಳಿಕೆಯನ್ನು ನೋಡಿ ಪರವಾಗಿಲ್ಲ ಒಬ್ಬ ಗಡಸಿನ ಗಂಡು ವ್ಯಕ್ತಿ ಕರ್ನಾಟಕ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿದ್ದಾನೆಂದು ನಾನು ಹೆಮ್ಮೆ ಪಟ್ಟೆ. ಇವತ್ತು ಅವರು ಆ 4 ಜನ ಮುಖ್ಯಮಂತ್ರಿಗಳ ಮುಂದೆ ಹೋಗಿದ್ದೇ ಅಪರಾಧ ಮತ್ತು ಆ ಸಮಿತಿ ಮಾಡುವುದಕ್ಕೆ ಏನಾದರೂ ಒಪ್ಪಿಕೊಂಡರೆ ಅದು ಮಹಾ ಗಂಡಾಂತರಕಾರಿ ಎಂದು ನಾವು ಹೇಳಬೇಕಾಗಿದೆ. ಕರ್ನಾಟಕದವರು ಈ ವಿಷಯವನ್ನು ಎತ್ತುತ್ತಾರೆ ಎಂದುಕೊಂಡು 'ಒಂದು ಕಡೆ ತೊಟ್ಟಿಲು ತೂಗುವುದು ಇನ್ನೊಂದು ಕಡೆ ಮಗುವನ್ನು ಚಿವುಟುವುದು' ಎನ್ನುವ ಗಾದೆ ತರಹ ಕೇಂದ್ರ ಸರ್ಕಾರ ಮಾಡತಕ್ಕದ್ದು ಸರಿಯಾದುದಲ್ಲ. ಆ ನಾಲ್ಕು ಜನ ಮುಖ್ಯಮಂತ್ರಿಗಳು ಸೇರಿ ಏನು ಒಂದು ಸಮಿತಿಯನ್ನು ಮಾಡಿದ್ದಾರೆ, ಅದಕ್ಕೆ ಲೀಗಲ್ ಸ್ಟೇಟಸ್ ಕೊಟ್ಟರೂ ಆ ಸಮಿತಿಯವರಿಗೆ ಬಹಿಷ್ಕಾರ ಹಾಕಬೇಕೆಂದು ನಮ್ಮ ವಿರೋಧ ಪಕ್ಷದವರ ಖಚಿತವಾದ

ನಿಲುವಾಗಿದೆ. ಈಗ ನಾನು ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಸೆಪ್ಟೆಂಬರ್ 30ನೇ ತಾರೀಖಿನವರೆಗೂ 'ವೋಟ್ ಆನ್ ಅಕೌಂಟ್' ತೆಗೆದುಕೊಳ್ಳಲಾಗಿರುವುದರಿಂದ ಸರ್ಕಾರದ ಸೌಕರರಿಗೆ ಅಥವಾ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ. ವೋಟ್ ಆನ್ ಅಕೌಂಟ್ ಅವಧಿ ಮುಗಿಯುವುದಕ್ಕೆ ಇನ್ನೂ ಒಂದು ತಿಂಗಳು 17 ದಿವಸಗಳ ಕಾಲ ಅವಕಾಶವಿದೆ. ಆದುದರಿಂದ, ಈಗ ಸಭೆಯನ್ನು ಮುಂದಕ್ಕೆ ಹಾಕಿ. ಮುಖ್ಯಮಂತ್ರಿಗಳು ಸಭೆಗೆ ಬರಲಿ, ಇವತ್ತೇ ಅಪ್ರೋಪ್ರಿಯೇಷನ್ ಬಿಲ್ ಮತ್ತು ಡಿಮ್ಯಾಂಡ್ಗಳು ಪಾಸ್ ಆಗಬೇಕೆಂಬ ಹಠ ಸರ್ಕಾರಕ್ಕೆ ಬೇಡ. ಸಭೆಯನ್ನು ಮುಂದಕ್ಕೆ ಹಾಕಿ ನಂತರ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿಕೊಳ್ಳೋಣ. ನಿಜ ಹೇಳಬೇಕೆಂದರೆ, ಬೇಡಿಕೆಗಳ ಮೇಲೆ ಇನ್ನೂ ಸರಿಯಾಗಿ ಚರ್ಚೆಯೇ ನಡೆದಿಲ್ಲ. ಇವತ್ತಿನ ದಿವಸ ಆ ಕಮಿಟಿಯವರು ಬರುತ್ತಾರೆ ಎನ್ನುವುದು ಒಂದು ಗಂಡಾಂತರಕಾರಿಯಾದ ವಿಷಯವಾಗಿದೆ. ಅವರು ಅಲಮಟ್ಟಿ ಡ್ಯಾಮ್ನ್ನು ನೋಡುವುದಕ್ಕೆ ಬರುತ್ತಾರೇನೋ? ಕರ್ನಾಟಕವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಬರುತ್ತಾರೇನೋ ಎನ್ನುವ ಭಾವನೆ ಬಂದಿರುವುದರಿಂದ 4 ಜನ ಮುಖ್ಯಮಂತ್ರಿಗಳು ನೇಮಕ ಮಾಡಿರುವ ಸಮಿತಿಗೆ ಕೇಂದ್ರ ಸರ್ಕಾರ ಕಾನೂನಿನ ಅಂಗೀಕಾರ ಕೊಟ್ಟರೂ ಕೂಡ ಅದಕ್ಕೆ ಕರ್ನಾಟಕ ರಾಜ್ಯ ಮಾನ್ಯತೆ ಮಾಡಬಾರದೆಂದು ಈ ಮೂಲಕ ಹೇಳುತ್ತೇನೆ. ಇವತ್ತು ಸಭೆಯನ್ನು ಮುಂದೂಡಿ, ನಾಳೆ ದಿವಸ ಮುಖ್ಯಮಂತ್ರಿಗಳು ಬರಲಿ. ಅವರು ಹೇಳಿಕೆಯನ್ನು ಕೊಡಲಿ. ಡಿಮ್ಯಾಂಡ್ಸ್ ಮತ್ತು ಅಪ್ರೋಪ್ರಿಯೇಷನ್ ಬಿಲ್ಗಳನ್ನು ಇನ್ನು ಒಂದೆರಡು ವಾರಗಳಾದ ನಂತರ ಬೇಕಾದರೆ ಪಾಸ್ ಮಾಡಿಕೊಳ್ಳೋಣ. ಇಲ್ಲದೇ ಹೋದರೆ ಈ ವಿಚಾರದಲ್ಲಿ ಕರ್ನಾಟಕ ಸರ್ಕಾರಕ್ಕೆ ಅಷ್ಟೊಂದು ಕಳಕಳಿ ಇಲ್ಲ ಎನ್ನುವ ವಿಚಾರ ನಮ್ಮ ಕರ್ನಾಟಕದ ಜನತೆಯ ಮನಸ್ಸಿನಲ್ಲಿ ಬರುತ್ತದೆ. ಈ ಸಭೆಯಲ್ಲಿ ಕುಳಿತು ನಾವೆಲ್ಲಾ ಲೋಪ ಮಾಡುತ್ತಿದ್ದೇವೇನೋ ಎನ್ನುವ ಭಾವನೆ ಜನರಲ್ಲಿ ಬಂದೀತು; ಅದರಲ್ಲೂ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಇರತಕ್ಕಂಥ ಜನ ನಮ್ಮನ್ನು ಕ್ಷಮಿಸುವುದಿಲ್ಲ. ಅದಕ್ಕಾಗಿ ಇದಕ್ಕೆ ಆದ್ಯತೆ ಕೊಡಬೇಕು. ಇದಕ್ಕಿಂಥ ಅವರ ಅಪ್ರೋಪ್ರಿಯೇಷನ್ ಬಿಲ್ ದೊಡ್ಡದಲ್ಲ. ಇದಕ್ಕಿಂಥ ಅವರ ಬೇಡಿಕೆಗಳು ದೊಡ್ಡದಲ್ಲ. ಅದಕ್ಕಾಗಿ ಡಿಮ್ಯಾಂಡ್ ಗಳು ಮತ್ತು ಅಪ್ರೋಪ್ರಿಯೇಷನ್ ಬಿಲ್ಗಳ ಬಗ್ಗೆ ಮಾತನಾಡಲು ಸಮಯವನ್ನು ಮುಂದಕ್ಕೆ ಹಾಕಿ. ಮೊದಲು ಈ ವಿಷಯದ ಬಗ್ಗೆ ಚರ್ಚೆ ಮಾಡೋಣವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಗಂಭೀರವಾದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಯಲ್ಲಿ ಇದ್ದಾರೆ. ಅಲ್ಲಿ ಏನೇನು ನಡೆಯುತ್ತಿದೆ ಎನ್ನುವ ಬಗ್ಗೆ ವಿಷಯಗಳನ್ನು ಪತ್ರಿಕೆಗಳ ಮೂಲಕ ನಾವು ನೋಡುತ್ತಿದ್ದೇವೆ. ಉಪ ಮುಖ್ಯಮಂತ್ರಿಗಳಿಗಾಗಲೀ ಅಥವಾ ಈ ನಮ್ಮ ಸರ್ಕಾರಕ್ಕಾಗಲೀ ಅಲ್ಲಿ ಏನು ನಡೆದಿದೆ ಎನ್ನತಕ್ಕಂಥಾದ್ದು ಗೊತ್ತಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ನಿನ್ನೆ ದಿವಸ ಸರ್ಕಾರದ ಹೇಳಿಕೆ ಪ್ರಕಾರ ಮಾನ್ಯ ಮುಖ್ಯಮಂತ್ರಿಯವರು ಸಮಿತಿ ಮಾಡಲು ಒಪ್ಪಿಲ್ಲವೆಂದು ಹೇಳಲಾಗಿತ್ತು. ತಕ್ಷಣವೇ ಸಮಿತಿ ಮಾಡಲು ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆಂದು ಅಲ್ಲಿಂದ ಸುದ್ದಿ ಬಂದ ತಕ್ಷಣ ಸರ್ಕಾರಕ್ಕೆ ಮುಖ ಭಂಗವಾಯಿತು. ಇದರ ಬಗ್ಗೆ ಸರ್ಕಾರಕ್ಕೂ ಮಾಹಿತಿ ಇಲ್ಲದೆ ಒಂದು ತರಹ ಬೇಜವಾಬ್ದಾರಿಯಿಂದ ಸರ್ಕಾರ ನಡೆಯುತ್ತಿದೆ.

ಶಾಸನ ಸಭೆ ನಡೆಯತಕ್ಕಂಥ ಸಂದರ್ಭದಲ್ಲಿ ಇಂಥಾ ಅವಿವೇಕಗಳು ನಡೆಯುವುದು ಒಳ್ಳೆಯದಲ್ಲ. ಯಾವುದೇ ಸಮಿತಿ ಆಲಮಟ್ಟಿ ವಿಚಾರದಲ್ಲಿ ಕರ್ನಾಟಕಕ್ಕೆ ಬಂದರೆ ನಾವು ಒಕ್ಕೊರಳಿನಿಂದ ಪಕ್ಷ ಬೇಧ ಮರೆತು ಇಡೀ ರಾಜ್ಯದ ಜನತೆ ಸಮಗ್ರವಾಗಿ ವಿರೋಧ ಮಾಡಲೇಬೇಕು. ಇವತ್ತು ನಾವು ಧರಣಿ ಕುಳಿತಿದ್ದೇವೆಂದು ಸರ್ಕಾರ ಎಲ್ಲಾ ಬೇಡಿಕೆಗಳನ್ನು ಪಾಸ್ ಮಾಡಿಕೊಂಡು ಹೋಗುವ ನೀತಿ ಸರಿಯಾದುದಲ್ಲವೆಂದು ಮಾನ್ಯ ನಂಜೇಗೌಡರು ಏನು ಹೇಳಿದ್ದಾರೋ ಅದಕ್ಕೆ ನಾನು ಸಹ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಆದುದರಿಂದ ಸದನವನ್ನು ಮುಂದಕ್ಕೆ ಹಾಕುವುದು ಒಳ್ಳೆಯದು. ಮುಖ್ಯ ಮಂತ್ರಿಯವರು ನಾಳೆ ಬರಲಿ ಅಥವಾ ನಾಡಿದ್ದು ಬರಲಿ, ಆ ವಿಷಯ ಬೇರೆ. ಈ ವಿಷಯದ ಬಗ್ಗೆ ಸರ್ಕಾರ ಪ್ರತಿಭಟನೆ ಮಾಡಲಿ ಅಥವಾ ಮಾಡದೇ ಇರಲಿ ಕರ್ನಾಟಕದ ಜನತೆ ಒಕ್ಕೊರಳಿನಿಂದ ಈ 4 ಜನ ಮುಖ್ಯ ಮಂತ್ರಿಗಳು ಮಾಡಿರತಕ್ಕಂಥ ಸಮಿತಿಯನ್ನು ನಾವು ವಿರೋಧ ಮಾಡುತ್ತೇವೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕ ನಿರ್ಣಯವನ್ನೂ ನಾವು ಸ್ಪಷ್ಟವಾಗಿ ವಿರೋಧ ಮಾಡುತ್ತೇವೆ. ಆದುದರಿಂದ ಈಗ ಸದನವನ್ನು ಮುಂದೂಡಿ ಮತ್ತೆ ಸೆಪ್ಟೆಂಬರ್ನಲ್ಲಿ ಸದನ ಸೇರಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

+ ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜೇಗೌಡರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ಸಾಯಂಕಾಲ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದಾಗ ಇವತ್ತು ಬರುತ್ತೇನೆಂದು ಕೇಳಿದ್ದರು. ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗ, ಇನ್ನೂ ಇರಬೇಕೆಂದು ಪ್ರಧಾನ ಮಂತ್ರಿಯವರು ಹೇಳಿರುವುದರಿಂದ ಈ ದಿನ ಸಾಯಂಕಾಲ ಬರುತ್ತೇನೆಂದು ಹೇಳಿದ್ದಾರೆ.

ಅಲ್ಲಿ ಏನು ನಡೆಯಿತು ಮತ್ತು ಅಲ್ಲಿನ ವಿದ್ಯಮಾನಗಳ ಬಗ್ಗೆ ನಮ್ಮ ಜೊತೆಗೆ ಮಾತನಾಡಿದ್ದಾರೆ. ನಿನ್ನೆಯೂ ಕೂಡ ನಾನು ಮತ್ತು ಶ್ರೀಮಾನ್ ನಾಣಯ್ಯನವರು ಸರಕಾರದ ನಿಲುವನ್ನು ಸ್ಪಷ್ಟ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಆಲಮಟ್ಟಿ ಬಗ್ಗೆ ಕರ್ನಾಟಕದ ಹಿತದ ಬಗ್ಗೆ, ನಮ್ಮ ಹಕ್ಕಿನ ಬಗ್ಗೆ ಏನು ಆಸಕ್ತಿ ಇದೆಯೋ, ಅವರ ಮನಸ್ಸಿನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ ಎಂಬ ಅನುಮಾನ ಬಂದಿದೆ. ಈ ಸಮಿತಿಯನ್ನು ಮಾಡುವುದರಿಂದ ಕೆಲವು ಬದಲಾವಣೆಗಳು ಆಗುತ್ತವೆ, ಹೊಸ ಬೆಳವಣಿಗೆಗಳು ಆಗುತ್ತವೆ ಎಂಬ ಆತಂಕ ಏನು ಅವರಲ್ಲಿ ಉಂಟಾಗಿದೆ, ಆ ಕುರಿತು ನಾನು ಮತ್ತೊಮ್ಮೆ ಸ್ಪಷ್ಟಪಡಿಸಲಿಚ್ಚಿಸುತ್ತೇನೆ. ಇದರಲ್ಲಿ ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ಆಲಮಟ್ಟಿ ಬಗ್ಗೆ ಸರಕಾರದ ಯಾವುದೇ ನಿಲುವಿನಲ್ಲಿ ಯಾವುದೇ ಬದಲಾವಣೆಗಳು ಇಲ್ಲ. ಬಚಾವತ್ ತೀರ್ಪಿನ ಪ್ರಕಾರ 734ಟಿಎಂಸಿ, ಇನ್ನೂ 5ಟಿಎಂಸಿ ಬಿಟ್ಟರೆ 729ಟಿಎಂಸಿ ನೀರನ್ನು ನಾವು ಬಳಸಿಕೊಳ್ಳಬೇಕು. ಅದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಅದನ್ನು ಬಳಸಿಕೊಳ್ಳಲಿಕ್ಕೆ ಸರಕಾರವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಹಾಗೆಯೇ ಆಲಮಟ್ಟಿಯ ಕೆಲಸವನ್ನು ಕೂಡ ಮುಂದುವರಿಸುತ್ತೇವೆ. ಇದನ್ನು ನಿನ್ನೆ ಕೂಡ ನಾನು ಹೇಳಿದ್ದೇನೆ. ಅಲ್ಲಿ ಸುದ್ದಿ ಮೂಡಿದ ಪ್ರಕಾರ ಅಲ್ಲಿ ಕೆಲಸವನ್ನು ನಿಲ್ಲಿಸಿಬಿಡುತ್ತಾರೆ ಎಂಬ ಆತಂಕವನ್ನು ಅವರು ಏನು ಪ್ರಸ್ತಾಪ ಮಾಡಿದ್ದರು ಅದು ಸರಿಯಲ್ಲ. ನಾನು ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿದ್ದೇನೆ. ಆ ರೀತಿಯಾಗಿ ಅವರು ಹೇಳಲಿಲ್ಲ. ಅಲ್ಲಿ ಕೆಲಸ ಮುಂದುವರಿಯುತ್ತದೆ. ಈ 9 ಜನರ ಸಮಿತಿಯನ್ನೇನು ಮಾಡುತ್ತಾರೆ, ಇದರಲ್ಲಿ ಸೆಂಟ್ರಲ್ ವಾಟರ್ಕಮಿಶನ್ನವರು

ಕೂಡ ಒಬ್ಬ ಸದಸ್ಯರಿರುತ್ತಾರೆ. ಪ್ಲಾನಿಂಗ್ ಕಮಿಶನ್ನವರು ಕೂಡ ಒಬ್ಬರು ಸದಸ್ಯರಿರುತ್ತಾರೆ. ಏಕೆಂದರೆ ಇವರು ಈಗಾಗಲೇ ಕ್ಲಿಯರ್ ಮಾಡಿದ್ದಾರೆ. ಅಲಮಟ್ಟಿ ಬಗ್ಗೆ ಪ್ಲಾನಿಂಗ್ ಕಮಿಶನ್‌ನವರು ಹಾಗೂ ಸಿಡಬ್ಲ್ಯುಸಿಯವರು ಹೀಗೆ ಇಬ್ಬರೂ ಕೂಡ ಕ್ಲಿಯರ್ಮಾಡಿದ್ದಾರೆ. ಆ ಕಾರಣಗಳಿಂದಾಗಿ ಅವರು ಕೂಡ ಸಮಿತಿಯಲ್ಲಿರಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ಒತ್ತಾಯ ಮಾಡಿದ್ದರಿಂದ ಅವರುಗಳು ಕೂಡ ಇರುತ್ತಾರೆ. ಈ ಸಮಿತಿಯ ನೇಮಕಕ್ಕೆ ಸರಕಾರವು ಆಜ್ಞೆಯನ್ನು ಹೊರಡಿಸತಕ್ಕಂಥಾದ್ದು. ಆದುದರಿಂದ ಅದು ಸರಕಾರ ನೇಮಕ ಮಾಡತಕ್ಕಂಥ ಸಮಿತಿಯಾಗುತ್ತದೆ. ಈಗ ಬಿಹಾರ್, ತಮಿಳುನಾಡು, ಅಸ್ಸಾಂ ಮತ್ತು ವೆಸ್ಟ್‌ಬೆಂಗಾಲ್ ಮುಖ್ಯಮಂತ್ರಿಗಳು ಸಮಿತಿಯಲ್ಲಿದ್ದಾರೆ. ಆದರೆ ಅವರು ನೇಮಕ ಮಾಡಿರತಕ್ಕಂಥಾದ್ದಲ್ಲ. ಅವರುಗಳು ಸಲಹೆಗಳನ್ನು ಕೊಟ್ಟಿದ್ದರು. ಆ ಸಲಹೆಗಳ ಆಧಾರದ ಮೇಲೆ ಸರಕಾರವೇ ಈ ಸಮಿತಿಯನ್ನು ರಚನೆ ಮಾಡತಕ್ಕಂಥಾದ್ದು. ಇನ್ನೂ ಕೂಡ ಆ ಬಗ್ಗೆ ಆದೇಶವು ಹೊರಟಿಲ್ಲ. ಅದರ ಪ್ರಕಾರ ಎರಡೂ ಭಾಗಗಳಲ್ಲಿ ನೋಡತಕ್ಕಂಥಾದ್ದು. ಏಕೆಂದರೆ ಆಂಧ್ರದ ಮುಖ್ಯಮಂತ್ರಿಯವರು ಕರ್ನಾಟಕದವರು ಬಚಾವತ್ ಆಯೋಗದ ತೀರ್ಪನ್ನು ಉಲ್ಲಂಘನೆ ಮಾಡುತ್ತಿದ್ದಾರೆಂದು ದೂರಿದ್ದಾರೆ. ನಾವು ಆಂಧ್ರದವರು ಉಲ್ಲಂಘನೆ ಮಾಡಿದ್ದಾರೆ, ತೆಲುಗುಗಂಗಾ ಕಾರ್ಯಕ್ರಮದಲ್ಲಾಗಲೇ, ಶ್ರೀಶೈಲಂನ ಎರಡೂ ನಾಲೆಗಳಲ್ಲಿನ ಕಾರ್ಯಕ್ರಮಗಳನ್ನು ಮಾಡತಕ್ಕಂಥಾದ್ದರಲ್ಲಾಗಲೀ, ಭೀಮಾ ಎಡದಂಡೆ ನಾಲೆಯ ಕಾರ್ಯಕ್ರಮಗಳನ್ನು ಮಾಡತಕ್ಕಂಥಾದ್ದರಲ್ಲಾಗಲೀ, ಜುರಾಲ ಯೋಜನೆ ಇರಲಿ, ಇಲ್ಲಿ ಎಲ್ಲಾ ನೀವು ವಯೋಲೆಟ್ ಮಾಡಿದ್ದೀರಿ ಎಂದು ನಾವು ಆರೋಪ ಮಾಡಿದ್ದೇವೆ.

ನಾವು ನಮ್ಮಲ್ಲಿ ಯಾವುದೇ ಉಲ್ಲಂಘನೆಯಾಗಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಇದು ಎಲ್ಲರಿಗೂ ಗೊತ್ತಿರುವ ಮತ್ತು ನಿರ್ವಿವಾದ ವಿಚಾರವೇ ಆಗಿದೆ. ಈಗ ಪರಿಸ್ಥಿತಿಯು ಅಲ್ಲಿಯವರೆಗೆ ಇದೆ. ಇವೊತ್ತು ಯಾವುದೇ ವಿಚಾರದಲ್ಲಿ ಅಧಿಕಾರದ ಆಸೆಗೋಸ್ಕರವಾಗಿ, ಪ್ರಧಾನಮಂತ್ರಿಯವರು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ರೀತಿಯಾಗಿ ಮಾಡುತ್ತಿದ್ದಾರೆಂದು ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದರಲ್ಲಿ ಯಾವುದೇ ಸತ್ಯಾಂಶ ಇಲ್ಲ. ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ವಿಚಾರದಲ್ಲಿ ನಮ್ಮ ನಿಲುವು ಅಚಲ. ನಾವಾಗಲೀ ಮಾನ್ಯ ಪ್ರಧಾನಿಯವರಾಗಲೀ, ರಾಜ್ಯದ ಹಿತವನ್ನು ಬಲಿಕೊಡುವ ಕೆಲಸವನ್ನು ಮಾಡುವುದಿಲ್ಲ ಎಂಬ ಮಾತನ್ನು ನಿನ್ನೆಯೂ ಹೇಳಿದ್ದೇನೆ. ಇವೊತ್ತು ಕೂಡ ಹೇಳುತ್ತಿದ್ದೇನೆ.

(ಗೊಂದಲ)

ನಮ್ಮ ನಿಲುವಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಈ ಸಮಿತಿಯು ರಚನೆಯಾದರೆ ಎರಡೂ ಭಾಗದಲ್ಲಿ ಮತ್ತು ಬಚಾವತ್ ತೀರ್ಪಿನಲ್ಲಿ ಯಾವುದೇ ಆಲ್ಟರ್ ಮಾಡತಕ್ಕಂಥಾದ್ದಾಗಲೀ ಈ-ಒಪನ್ ಮಾಡತಕ್ಕಂಥಾದ್ದಾಗಲೀ ಮುಂತಾಗಿ ಯಾವುದೇ ಪ್ರಶ್ನೆ ಇಲ್ಲ.

ಶ್ರೀವಾಟಾಳ್ ನಾಗರಾಜ್ : ಈ ಸಮಿತಿಯು ಯಾರಿಗೆ ಬೇಕು? ಇದಕ್ಕೆ ಯಾವ ಸಂವಿಧಾನದ ಹಕ್ಕು ಇದೆ?

ಶ್ರೀ ಸಿದ್ದರಾಮಯ್ಯ : ಇದರಲ್ಲಿ ತಮಿಳುನಾಡಿವರಷ್ಟೇ ಇರುವುದಿಲ್ಲ. ಆದರಲ್ಲಿ ಬೆಂಗಾಲ್‌ನವರು ಇಬ್ಬರು ಇರುತ್ತಾರೆ. ಅಸ್ಸಾಂನವರು ಒಬ್ಬರು ಇರುತ್ತಾರೆ, ಬಿಹಾರ್‌ನವರು

ಇಬ್ಬರು ಇರುತ್ತಾರೆ, ಮತ್ತು ಸಿಡಬ್ಲ್ಯೂಸಿ ಇಂದ ಒಬ್ಬರು, ಪ್ಲಾನಿಂಗ್‌ಕಮಿಶನ್‌ನವರು ಒಬ್ಬರು ಇರುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಆ ಸಮಿತಿಯಲ್ಲಿ ಬೆಂಗಾಲ್‌ನವರು ಇದ್ದಾರೆ, ಅಸ್ಸಾಂನವರು ಇದ್ದಾರೆ, ಅದರಿಂದ ನಮಗೆ ನ್ಯಾಯ ದೊರಕುತ್ತದೆಂಬ ನಂಬಿಕೆ ಇಲ್ಲ. ಆ ಸಮಿತಿಯು ನಮಗೆ ಬೇಕಾಗಿಲ್ಲ.

ಶ್ರೀ ಸಿದ್ಧರಾಮಯ್ಯ : ಆದ್ದರಿಂದ ಸಮಿತಿಯು ಈ ತರಹದಲ್ಲಿ ಇರಬೇಕು ಮತ್ತು ಎರಡೂ ಕಡೆಯ ವಿಚಾರಗಳನ್ನು ನೋಡಿ ಯಾರು ಉಲ್ಲಂಘನೆ ಮಾಡಿದ್ದಾರೆಂಬ ಬಗ್ಗೆ ವರದಿಯನ್ನು ಕೊಡ ಬೇಕೆಂಬ ಬಗ್ಗೆ ಇದೆ. ಇದು ಇರತಕ್ಕಂಥ ವಿಚಾರ.

ಶ್ರೀ ವಾಟಾಳ್ ನಾಗರಾಜ್ : ಅವರು ಇಲ್ಲಿ ಬಂದು ನೋಡುವುದಕ್ಕೆ ಯಾರು?

ಶ್ರೀ ಸಿದ್ಧರಾಮಯ್ಯ : ರಾಜ್ಯಕ್ಕೆ ಅನ್ಯಾಯವಾಗತಕ್ಕಂಥ ರಾಜ್ಯದ ರೈತರ ಹಿತಕ್ಕೆ ಧಕ್ಕೆ ಬರತಕ್ಕಂಥ ಯಾವ ಕೆಲಸವನ್ನೂ ಕೂಡ ಈ ಸರಕಾರವು ಮಾಡುವುದಿಲ್ಲ. ಅಂಥ ಪರಿಸ್ಥಿತಿಯು ಬಂದರೆ ನಾವು ಕುರ್ಚಿಯಲ್ಲಿ ಉಳಿಯತಕ್ಕಂತ ಕೆಲಸವನ್ನು ಮಾಡುವುದಕ್ಕೆ ತಯಾರಾಗಿಲ್ಲ. ಇವರಿಗೆ ಜನರ ಹಿತವನ್ನು ಕಾಪಾಡುವಲ್ಲಿ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿಯು ಈ ಸರಕಾರಕ್ಕೂ ಇದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀವಾಟಾಳ್ ನಾಗರಾಜ್ : ಯಾವ ಆಸಕ್ತಿಯೂ ನಿಮಗಿಲ್ಲ. ನೀವು ಕರ್ನಾಟಕದ ಕಥೆಯನ್ನು ಮುಗಿಸಿದ್ದೀರಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾಳೆ ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ, ಅವರು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಕರ್ನಾಟಕದ ಹಿತಕ್ಕೆ ನೀವು ಧಕ್ಕೆ ತಂದಿದ್ದೀರಿ. ಪ್ರಧಾನ ಮಂತ್ರಿಯವರು ಇಲ್ಲಿ ಸ್ವಾರ್ಥ ಮಾಡಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಅಪ್ರೋಪ್ರಿಯೇಶನ್ ಬಿಲ್ಲನ್ನು ಇವೊತ್ತು ಪಾಸ ಮಾಡಲು ತಾವುಗಳು ಸಹಕಾರ ಕೊಡಬೇಕು. ಸದನವನ್ನು ಮತ್ತೆ ಮುಂದೂಡತಕ್ಕಂಥ ವಿಚಾರದಲ್ಲಿ ಕೂಡ ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. 14ನೇ ತಾರೀಖಿಗೆ ಸದನವು ಮುಗಿಯಬೇಕು ಮತ್ತು ಎಲ್ಲಾ ಬೇಡಿಕೆಗಳು ಕೂಡ ಪಾಸ್ ಆಗಬೇಕು -ಎಂಬಿತ್ಯಾದಿ ವಿಚಾರಗಳಿಗೆಲ್ಲ ಮಾನ್ಯ ವಿರೋಧ ಪಕ್ಷದವರು ಕೂಡ ಒಪ್ಪಿಕೊಂಡಿರುತ್ತಾರೆ. ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇವುಗಳನ್ನು ಪಾಸ್ ಮಾಡಲು ತಾವುಗಳು ಸಹಕಾರ ಕೊಡಬೇಕು, ನಾಳೆ ಮುಖ್ಯಮಂತ್ರಿಯವರು ಬಂದು ಎಲ್ಲಾ ವಿವರಗಳನ್ನೊಳಗೊಂಡ ಹೇಳಿಕೆಯನ್ನು ಕೊಡುತ್ತಾರೆ ಎನ್ನತಕ್ಕಂಥ ವಿಚಾರವನ್ನು ಹೇಳಬಯಸುತ್ತೇನೆ. ಮತ್ತೊಮ್ಮೆ ತಾವೆಲ್ಲರೂ ಸಹಕಾರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ತಮ್ಮ ಮುಂದಿರತಕ್ಕಂಥ ವಿಷಯವನ್ನು ಪ್ರಸ್ತಾಪ ಮಾಡಿ ಹೇಳಿದ್ದಾರೆ. ಇವೊತ್ತು ಈ ಸದನದ ಮುಂದಿರತಕ್ಕಂಥ

ಪ್ರಶ್ನೆ, ಮುಖ್ಯವಾಗಿ ನಿನ್ನೆ ತಾವು ಅಪ್ಪಣೆ ಕೊಟ್ಟಿದ್ದೀರಿ. ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಈ ಗೊಂದಲವೇನು ಉಂಟಾಗಿದೆ, ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ಮತ್ತು ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರು ಬಂದು ಕೊಡುತ್ತಾರೆಂದು ಹೇಳಿ ಈ ಮಾತನ್ನು .....

ಅಧ್ಯಕ್ಷರು : ಮಾನ್ಯ ನಂಜೇಗೌಡರು ಕೂಡ ಅದನ್ನೇ ಹೇಳಿದರು. ರಿಕಾರ್ಡ್‌ಗೆ ಮತ್ತು ಪತ್ರಿಕೆಗಳ ಮುಖಾಂತರ.... ನಾನು ಹೇಳಿದ್ದು, ನಿನ್ನೆ ಇಲ್ಲಿ ಉಂಟಾದ ಸಂದಿಗ್ಧತೆಯನ್ನು ನೋಡಿ ಮುಖ್ಯ ಮಂತ್ರಿಗಳು ಬಂದು ಹೇಳಿಕೆ ಕೊಟ್ಟರೆ ಇದು ಪರಿಹಾರ ಆಗಬಹುದು ಎಂಬ ವಿಚಾರ ಬಂತು. ಅದಕ್ಕಾಗಿ ಮುಖ್ಯಮಂತ್ರಿಯವರು ಇವೊತ್ತು ರಾತ್ರಿ ಬರುವ ಚಾನ್ಸ್ ಇಲ್ಲ, ನಾಳೆ ಬರಬಹುದು ಅದಕ್ಕೆ ನಾಳೆ 11 ಗಂಟೆಗೆ ಇದನ್ನು ಹಾಕೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಕಾರದವರು ಕೂಡ ಮುಖ್ಯಮಂತ್ರಿಯವರು ಬಂದು ಸ್ಟೇಟ್‌ಮೆಂಟ್ ಕೊಡುತ್ತಾರೆಂದು ಹೇಳಿದರು. 9-30ಕ್ಕೆ ಸದನವು ನಡೆಯತಕ್ಕಂಥಾದ್ದು, ತಾವು ಕೂಡ ಅನುಕೂಲವಾಗಲಿ ಎಂದು 11 ಗಂಟೆಗೆ ಸದನವನ್ನು ಮುಂದುವರಿಸಿದ್ದೀರಿ. 11 ಗಂಟೆಗೆ ಸೇರುವುದೆಂದು ಆಯಿತು. ಆದರೆ 11 ಗಂಟೆಯಾದರೂ ಕೂಡ ನಮ್ಮ ನೀರಾವರಿ ಸಚಿವರು ಬರಲಿಲ್ಲ, ಮುಖ್ಯ ಮಂತ್ರಿಯವರು ಕೂಡ ಬರಲಿಲ್ಲ. ಮತ್ತು ಯಾವ ಹಿನ್ನಲೆಯಲ್ಲಿ ಈ ಸಮಿತಿಗಳು ರಚನೆಯಾದುವು ಎಂಬುದನ್ನು ಸ್ಪಷ್ಟಪಡಿಸತಕ್ಕಂಥಾದ್ದು ನಿನ್ನೆಯೂ ಆಗಿಲ್ಲ, ಇವೊತ್ತು ಕೂಡ ಆಗುತ್ತದೆಂದು ನಂಬುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಿನ್ನೆ ಅವರು ನಮ್ಮ ಹತ್ತಿರ ಮಾಹಿತಿಗಳು ಇಲ್ಲ, ಮುಖ್ಯಮಂತ್ರಿಯವರು ಬಂದ ಮೇಲೆ ನಿಮಗೆ ಅಥೆಂಟಿಕ್ ಇನ್‌ಫಾರ್ಮೇಶನ್ ಕೊಡುತ್ತೇವೆಂದು ಹೇಳಿದರು. ನಾವು ಕೇಳಿದಾಗ ಪತ್ರಿಕೆಯ ಮೇಲೆ, ಪಿಟಿಐ ನ್ಯೂಸ್‌ಮೇಲೆ ನೀವು ಮಾತನಾಡುತ್ತಿದ್ದೀರಿ ಎಂಬ ಮಾತನ್ನು ಅವರು ಪ್ರಸ್ತಾಪ ಮಾಡಿದರು. ಇವೊತ್ತು ಕೂಡ ಅದೇ ಪರಿಸ್ಥಿತಿಯೇ ಉಳಿದಿದೆ. ಇನ್ನೂ ಮುಖ್ಯಮಂತ್ರಿಯವರೇ ಬಂದಿಲ್ಲ. ಅವರ ಹೇಳಿಕೆಗಳನ್ನು ನಾವಿನ್ನೂ ಕೇಳಬೇಕಾಗಿದೆ. ಎರಡನೇಯದಾಗಿ ನಾಲ್ಕು ಜನ ಮುಖ್ಯಮಂತ್ರಿಯವರು ಇವೊತ್ತಿನ ದಿವಸ ಸೇರಿ ಒಂದು ಕಮಿಟಿಯನ್ನು ಮಾಡಿ ಅವರ ನಿರ್ದೇಶನ ಮತ್ತು ಸಲಹೆಗಳ ಮೇರೆಗೆ 9 ಜನರ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿದರು ಎನ್ನತಕ್ಕಂಥಾದ್ದು ಈಗ ಯಾವ ಗುಟ್ಟಾಗಿಯೂ ಉಳಿದಿಲ್ಲ, ಬಹಿರಂಗವಾಗಿದೆ. ಹಾಗಾದರೆ ಈ ನಾಲ್ಕು ಜನ ಮುಖ್ಯಮಂತ್ರಿಗಳು ಯಾವ ಪಾರ್ಟಿಯವರು? ನೀವು ನಾಲ್ಕು ಜನ ಮುಖ್ಯಮಂತ್ರಿಯವರಿಗೆ ಕನ್‌ಸಲ್ಟ್ ಮಾಡಬೇಕಾಗಿದ್ದರೆ-ಒರಿಸ್ಸಾ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಹಿಮಾಚಲ, ಪಂಜಾಬ್-ಮುಂತಾಗಿ ರಾಜ್ಯಗಳ ಮುಖ್ಯಮಂತ್ರಿಗಳು ಇದ್ದರು. ಹೀಗೆ ಇವರೆಲ್ಲರನ್ನೂ ಬಿಟ್ಟು ಈ ನಾಲ್ಕು ಜನ ಮುಖ್ಯಮಂತ್ರಿಗಳನ್ನೇ ಕನ್ಸಲ್ಟ್ ಮಾಡಬೇಕಾದರೆ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳ ಒಂದು ಸಭೆಯನ್ನು ಸೇರಿಸಿ ಅವರ ಸಲಹೆಗಳನ್ನು ತೆಗೆದುಕೊಂಡು ಇಂಥ ಅಂತರ್‌ರಾಜ್ಯದ ನೀರಾವರಿ ಸಮಸ್ಯೆಗಳಿಗೆ ಯಾವ ರೀತಿಯಾಗಿ ನಾವು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಬಹುದು ಎಂದು ಹೇಳಿ ನೀವು ಅವರೆಲ್ಲರನ್ನೂ ಕರೆಸಿ ಏನಾದರೂ ನಿರ್ಣಯವನ್ನು ತೆಗೆದುಕೊಂಡಿದ್ದರೆ ಅದು ಒಂದು ರೀತಿಯಾಗಿ ನ್ಯಾಯ ಎಂದು ಹೇಳ ಬಹುದಾಗಿತ್ತು. ಆದರೆ ಈ ನಾಲ್ಕು ಜನ ಮುಖ್ಯಮಂತ್ರಿಯವರು ಸ್ವಂತವಾಗಿ ನಿಮ್ಮ ಯುನೈಟೆಡ್ ಫ್ರಂಟ್ ಸರಕಾರಕ್ಕೆ ಸೇರಿದವರು ಮತ್ತು ಅವರ ಆಶೀರ್ವಾದ ಮಾಡಿ ಸರಕಾರವನ್ನು ನಿಲ್ಲಿಸತಕ್ಕಂಥವರು.

1.30 ಪಿ.ಎಂ.

ಅದಕ್ಕೇ ಅವರ ಸಲಹೆ ಮೇರೆಗೆ ನೀವೊಂದು ಎಕ್ಸ್‌ಪರ್ಟ್ ಕಮಿಟಿ ಮಾಡಿಕೊಂಡಿರಿ, ಆ ಕಮಿಟಿ ಇಲ್ಲಿಗೆ ಒಂದು ಕೆಲಸ ನಡೆದಿದೆಯೋ ಇಲ್ಲವೋ ಅಥವಾ ಬಚಾವತ್ ಅವಾರ್ಡ್ ವಯಲೇಟ್ ಮಾಡಿದ್ದೇವೋ ಇಲ್ಲವೋ ಎಂದು ನೋಡುವ ಜವಾಬ್ದಾರಿಯಿಂದ ಇನ್‌ಸ್ಪೆಕ್ಟ್ ಮಾಡುತ್ತಾರೆಂದು ಹೇಳುತ್ತಾರೆ. ಯಾವ ಸಂವಿಧಾನದ ಪ್ರಕಾರ ಈ ಸಮಿತಿ ರಚನೆಯಾಗಿದೆ? ಇದು ಸಂವಿಧಾನಬಾಹಿರ, ಸಂವಿಧಾನಕ್ಕೆ ವಿರುದ್ಧವಾದದ್ದು ಎಂದು ಸ್ಪಷ್ಟವಾಗಿ ಜೈಪಾಲರೆಡ್ಡಿಯವರು ಹೇಳಿದ್ದಾರೆ, ಈ ಎಕ್ಸ್‌ಪರ್ಟ್ ಕಮಿಟಿ ವರದಿ ನಮಗೆ ಬೈಂಡಿಂಗಿಲ್ಲ ಎಂದು ಒಂದು ಕಡೆ ಹೇಳುತ್ತೀರಿ ಇನ್ನೊಂದು ಕಡೆ ಆ ಎಕ್ಸ್‌ಪರ್ಟ್ ಕಮಿಟಿ ಯಾರು ಅನ್ಯಾಯ ಮಾಡಿದ್ದಾರೆಂದು ಕಂಡುಹಿಡಿಯಲು ತೆಲುಗುಗಂಗಾ, ಜುರಾಲಾ, ಶ್ರೀ ಶೈಲಂ ಬಲದಂಡೆ ಕಾಲುವೆಗಳನ್ನು ಮತ್ತು ನಮ್ಮ ಆಲಮಟ್ಟಿಯದೂ ನೋಡುತ್ತಾರೆ ಎಂದು ಹೇಳುತ್ತಿರಲ್ಲ, ಅಂದರೆ ಏನು ನೀತಿ ಇದು? ಯಾವುದನ್ನು ನಾವು ನಂಬಬೇಕು? ಇಂತಹ ಕಾನೂನು ಬಾಹಿರವಾದ ಸಂವಿಧಾನಬಾಹಿರವಾದ ಒಂದು ಸಮಿತಿ ರಚನೆಮಾಡಿ ಹೊಸ ಪ್ರೆಸಿಡೆಂಟನ್ನು ಸೃಷ್ಟಿ ಮಾಡುತ್ತಿದ್ದೀರಿ. ಒಂದು ಟ್ರಿಬ್ಯೂನಲ್ ಅವಾರ್ಡ್ ಚಾಲ್ತಿಯಲ್ಲಿದ್ದಾಗ ಹೊಸ ಕಮಿಟಿ ಮಾಡಿ ಅವವು ಎಲ್ಲ ಕಡೆ ಸುತ್ತಾಡಿ ಸ್ಟೀರಿಂಗ್ ಕಮಿಟಿ ಮುಂದೆ ವರದಿ ಕೊಡಬೇಕಾದರೆ ನೀವು ಹೊಸ ಪ್ರೆಸಿಡೆಂಟ್ ಸೃಷ್ಟಿಸಿ ನಮ್ಮನ್ನು ಶೂಲಕ್ಕೇರಿಸುತ್ತೀರಿ ಎಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ ಮುಂದೆ ಬರುವ ಪ್ರಧಾನಿಗಳೂ ಈ ಪ್ಲೀ ತೆಗೆದುಕೊಳ್ಳಬಹುದು, ಆರೆ ಹಿಂದೆ ಆಂಧ್ರ ಕರ್ನಾಟಕದ ಜಲವಿವಾದ ಉಂಟಾದಾಗ ಮಾಡಿದ್ದನ್ನೇ ನಾವೂ ಮಾಡಬಹುದು. ಎಂದು ಎರಡನೆಯದಾಗಿ ಇಡೀದೇಶದಲ್ಲಿ ನಾವು ಒಂದು ಇಕ್ಕಟ್ಟಿಗೆ ಸಿಕ್ಕಿಬೀಳುತ್ತೇವೆ ಏಕೆಂದರೆ ಆ ನಾಲ್ಕು ಮುಖ್ಯಮಂತ್ರಿಗಳು ಏನು ಹೇಳಬಹುದು? ಕರ್ನಾಟಕದವರು ತಮಿಳುನಾಡಿನ ಜೊತೆಯಲ್ಲೂ ಜಗಳ ಕಾದುಕೊಳ್ಳುತ್ತಾರೆ ಈ ಕಡೆ ಆಂಧ್ರದ ಜೊತೆಯಲ್ಲೂ ಜಗಳ ಕಾದುಕೊಳ್ಳುತ್ತಾರೆ ಇವರು ಯಾವುಗಲೂ ಜಗಳ ಗಂಟರು ಎಂಬ ಅಪಾದನೆಗೆ ನಾವು ಗುರಿಯಾಗುತ್ತೇವೆ. ಆ 4 ಮುಖ್ಯಮಂತ್ರಿಗಳೂ ಕೂಡ ನಮ್ಮ ರಾಜ್ಯದ ವಿರುದ್ಧ ಹೋಗಲು ಸಾಧ್ಯವಿದೆ. ಏಕೆಂದರೆ ಅವರ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳದಿದ್ದಾಗ ಅವವು ನ್ಯಾಚುರಲಿ,ಓ ಕರ್ನಾಟಕದವರು ಯಾವಾಗಲೂ ಹೀಗೇ ಮಾಡುತ್ತಾರೆಂದು ನಾವು ಇತರೆ ಮುಖ್ಯಮಂತ್ರಿಗಳ ಸದ್‌ಭಾವನೆಯಾನ್ನು ಕಳೆದುಕೊಳ್ಳಬೇಕಾಗಿ ಬರಬಹುದು. ನಿಮ್ಮ ಪಕ್ಷದ ಸರ್ಕಾರದ ಅಳಿವು ಉಳಿವಿಗಾಗಿ ಈ ರಾಜ್ಯದ ಹಿತವನ್ನು ಬಲಿಕೊಡಬಾರದು, ಇದರಿಂದ ದೊಡ್ಡ ಅನಾಹುತವಾಗುತ್ತಿದೆ. ಇದಕ್ಕಾಗಿ ನಮ್ಮ ಬಲಿ ಕೊಟ್ಟು ನಮ್ಮ ಬಲಿದಾನದ ಮೇಲೆ ರಾಜ್ಯವನ್ನೂ ದೇಶವನ್ನೂ ಆಳುತ್ತೇವೆ ಎಂದರೆ ಖಂಡಿತವಾಗಿ ಅದು ಸರಿಯಲ್ಲ. ಅವರು ಸ್ಪೆಶಲ್ ಫ್ಲೈಟ್‌ನಲ್ಲಿ ಬರಲಿ. ಲಗ್ನಮೂಹೂರ್ತವಿದ್ದರೆ ಸಮಿತಿಗಳಿದ್ದರೆ ಪ್ರಧಾನಮಂತ್ರಿಗಳು ಓತ್ ತೆಗೆದುಕೊಳ್ಳುತ್ತಾರೆಂದರೆ ಇಲ್ಲಿಂದ ಸ್ಪೆಷಲ್‌ಫ್ಲೈಟ್ ಮಾಡಿಕೊಂಡು ಹೋಗಿದ್ದನ್ನು ನಾವೆಲ್ಲ ನೋಡಿದ್ದೇವೆ ಕೇಳಿದ್ದೇವೆ. ಇವತ್ತು ಸದನ ನಡೆಯುತ್ತಿದ್ದರೂ ಅದಕ್ಕೆ ಅಗೌರವ ತೋರಿಸಿ ಅವರು ಅಲ್ಲೇ ಕುಳಿತು ನೀವು ಸದನ ನಡೆಸಿಕೊಂಡು ಹೋಗಿ ಅಂದರೆ ಇದು ಸರಿಯಾದ್ದಲ್ಲ. ಅದಕ್ಕಾಗಿ ಅವರನ್ನು ದಯವಿಟ್ಟು ಕರೆಸಿ ಅವರಿಂದ ಹೇಳಿಕೆ ಕೊಡಿಸಿ, ಒಂದು ವೇಳೆ ನೀವು ಕರೆದರೂ ಅವರು ಮಣಿಯದಿದ್ದೋನರೆ ಅದಕ್ಕೆ ಬೀದಿಯಲ್ಲೆ ಜಗಳ ಆಡಬೇಕಾಗುತ್ತದೆ. ಅದಕ್ಕೆ ವಿಧಾನಸೌಧ ಏಕೆ ಬೇಕು?

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದು ಕೇವಲ ಬಿಜೆಪಿ ವಿಚಾರವಲ್ಲ ಒಟ್ಟಾರೆ ವಿರೋಧಪಕ್ಷಗಳ ನಮ್ಮ ಅಭಿಪ್ರಾಯವನ್ನು ಶ್ರೀ ನಂಜೇಗೌಡರು ಬಹಳ ಸ್ಪಷ್ಟವಾಗಿ ತಿಳಿಸಿದ್ದಾರೆ. ನಾನು ಒಂದೇ ಮಾತು ಹೇಳುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಮಾತನಾಡುವಾಗ ಅವರ ಹೇಳಿಕೆ ಪ್ರಕಾರ ಆ ಮುಖ್ಯಮಂತ್ರಿಗಳ ಸಮಿತಿ. ತಜ್ಞರ ಸಮಿತಿಯನ್ನು ಕೇಂದ್ರ ಸರ್ಕಾರವೇ ಕಳುಹಿಸುತ್ತಿದೆ ಎಂದು ಅದಕ್ಕೊಂದು ಲೀಗಲ್‌ಸ್ಯಾಂಕ್ಷಿಟಿ ಕೊಡುವಂತಹ ಪ್ರಯತ್ನ ನಡೆದಿದೆ ಎಂಬುದು ಸ್ಪಷ್ಟವಾಯಿತು. ಅಧ್ಯಕ್ಷರೇ, ತಮಗೆ ಗೊತ್ತಿದೆ, ತೆಲುಗುದೇಶಂ ಅಧಿಕಾರ ಕಳೆದುಕೊಂಡಾದ ಕರ್ನಾಟಕದಲ್ಲಿ ಅವರಿಗೆ ರಕ್ಷಣೆ ಕೊಟ್ಟೆವು, ಇಲ್ಲದಿದ್ದರೆ ಅದಿರುತ್ತಿರಲಿಲ್ಲ. ನಮ್ಮ ಋಣ ತೀರಿಸಬೇಕಾಗಿತ್ತು. ಆದರ ಬದಲಿಗೆ ನಮ್ಮ ಜೊತೆ ಇವತ್ತು ಕುಚೋದ್ಯ ಮಾಡಿಕೊಂಡು ಅವರ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಕಾಲದಲ್ಲಿ ರಾಜಕೀಯ ದೊಂಬರಾಟ ಮಾಡಿ ಒಂದು ಬಗೆಯ ಬ್ಲಾಕ್‌ಮೇಲ್ ಕೆಲಸ ಮಾಡುತ್ತಿದ್ದಾರೆ. ಕಾವೇರಿ ವಿಷಯದಲ್ಲೂ ಇದೇ ಗೊಂದಲ ಮಾಡಿಕೊಂಡು ದೇಶದ ಜನರ ಮುಂದೆ ನಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಪ್ರಯತ್ನ ನಡೆಯಿತು. ಈಗ ಆ ಟೆಕ್ನಿಕಲ್ ಕಮಿಟಿ ಏನಾದರೂ ವರದಿ ಕೊಟ್ಟರೆ ಆಗಲೂ ನಾವು ಒಪ್ಪಲಿಲ್ಲವೆಂದು ದೇಶದ ಜನರ ಮುಂದೆ ನಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಕುತಂತ್ರ ಬಹಳ ಸ್ಪಷ್ಟ ಇದೆ. ಎರಡು ಸಾವಿರ ವರ್ಷದೊಳಗೆ ಈ ಯೋಜನೆಯನ್ನು ನಾವು ಮಾಡಿ ಮುಗಿಸಬಾರದು, ನಾಳೆ ದಿವಸ ಎರಡನೆ ಹಂತದ್ದನ್ನು ದುರುಪಯೋಗ ಮಾಡಿಕೊಂಡು ಮತ್ತೆ ಬೆನಿಫಿಟ್ ಪಡೆದುಕೊಳ್ಳುವ ಪ್ರಯತ್ನ ಮಾನ್ಯ ಚಂದ್ರಬಾಬುನಾಯ್ಡುರವರು ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇಂತಹ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಏನು ಒತ್ತಾಯಿಸಿದೆವು? ಎಂದರೆ ಆ ಸಮಿತಿ ಕರ್ನಾಟಕಕ್ಕೆ ಬರಬಾರದು ಅದನ್ನು ವಿರೋಧ ಮಾಡಬೇಕೆಂದು ಮುಖ್ಯಮಂತ್ರಿಗಳಿಗೆ ತಿಳಿಸಿ ಎಂದು ನಿನ್ನೇನೆ ಹೇಳಿದ್ದೆವು. ಸದನ ನಡೆಯಬೇಕಾದರೆ ಮುಖ್ಯಮಂತ್ರಿಗಳು ಬರಲಿಲ್ಲ. ಅಧ್ಯಕ್ಷರೇ ಇವತ್ತು ತಾವು ಸರ್ಕಾರದ ಒತ್ತಡಕ್ಕೆ ಮಣಿದು ಡಿಮಾಂಡ್ಸನ್ನು ಪಾಸ್ ಮಾಡಿದರೆ ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಕರಾಳ ದಿನ ಇದಾಗಬಹುದು ಏಕೆಂದರೆ ನಾಡಿನ ಜನರ ಹಿತದೃಷ್ಟಿಯಿಂದ ಒಂದು ಪ್ರಮುಖವಾದ ವಿಷಯಕ್ಕೆ ಒತ್ತುಕೊಟ್ಟು ನಾವು ಪ್ರಸ್ತಾಪಿಸುತ್ತಿರುವಾಗ ಅದನ್ನು ಧಿಕ್ಕರಿಸಿದಂತಾಗುತ್ತದೆ. ಅಲ್ಲದೆ ಇನ್ನೂ ಒಂದೂವರೆ ತಿಂಗಳು ಸಮಯ ಇದೆ ನಾವು ಪಾಸ್‌ಮಾಡಿಕೊಡಲು ಸಿದ್ಧರಿದ್ದೇವೆ, ಎಲ್ಲರೀತಿ ಸಹಕಾರವನ್ನೂ ಕೊಟ್ಟಿದ್ದೇವೆ.

ಮುಖ್ಯಮಂತ್ರಿಗಳು ಬಚಾವತ್ ವರದಿಗೆ ನಾನು ಬದ್ಧವಾಗಿದ್ದೇನೆ, ಯಾವುದು ವಯಲೇಶನ್ ಆಗಿಲ್ಲ, ನಿಮ್ಮ ಅಗತ್ಯವೇ ಇಲ್ಲವೆಂದು ಹೇಳಿ ಬರಬೇಕಾಗಿತ್ತು. ಬಚಾವತ್ ಆಯೋಗದ ತೀರ್ಪಿನಂತೆ ನಮ್ಮ ಜಲಾಶಯದ ಕೆಲಸಕಾರ್ಯ ಮುಂದುವರೆಸುತ್ತಾರೆಂದು ನಾವು ತಿಳಿದುಕೊಂಡಿದ್ದರೆ ದೇವೇಗೌಡರನ್ನು ಬಚಾವ್ ಮಾಡುವ ಕೆಲಸದಲ್ಲಿ ಮುಖ್ಯಮಂತ್ರಿಗಳು ನಿರತರಾಗಿರುವುದು ದ್ರೋಹವೆಂದು ಹೇಳುತ್ತೇನೆ, ಅದೊಂದು ಅಕ್ಷಮ್ಯ ಅಪರಾಧ. ಅದಕ್ಕಾಗಿ ನಾನು ಪ್ರತಿಭಟಿಸುತ್ತೇನೆ ಏಕಸ್ಮಾತ್ 9 ಜನರ ತಜ್ಞರ ಸಮಿತಿ ಬಂದರೆ ನಾವು ಪ್ರತಿಪಕ್ಷದವರೆಲ್ಲ ಅದನ್ನು ಬಾಯ್ಕಾಟ್ ಮಾಡುತ್ತೇವೆ. ಕರ್ನಾಟಕದ ಜಲಾಶಯ ನೋಡುವುದಕ್ಕೆ ನಾವು ಬಿಡುವುದಿಲ್ಲ, ಇಡೀ ಕರ್ನಾಟಕದ ಜನ ಒಂದಾಗಿ ಇದಕ್ಕೆ ಪ್ರತಿಭಟನೆ ಮಾಡುತ್ತೇವೆ. ಒಂದೇ ಮಾತು ನಾನು ಹೇಳುತ್ತೇನೆ, ತಮಿಳುನಾಡಿನ ಏಜೆಂಟರಂತೆ ನಮ್ಮ ಸರ್ಕಾರ ವರ್ತನೆ ಮಾಡುತ್ತಿದೆ, ನೀವು ಅಧಿಕಾರದಲ್ಲಿ ಮುಂದುವರೆಯುವಂತಹ ನೈತಿಕ ಹಕ್ಕಿಲ್ಲ, ಅಧಿಕಾರ

ಬಿಟ್ಟು ತೊಲಗಿ ಎಂದು ಹೇಳಲಿಚ್ಚಿಸುತ್ತೇನೆ. ದಯಮಾಡಿ ಸದನವನ್ನು ಮುಂದೂಡಿ, ಮುಂದಿನ ತಿಂಗಳು ಅಧಿವೇಶನ ಕರೆಯಿರಿ, ಆಗ ಸುದೀರ್ಘವಾಗಿ ಚರ್ಚೆ ಮಾಡೋಣವೆಂದು ಹೇಳುತ್ತಾ, ಇವತ್ತೇನು ಕೈಜೋಡಿಸುವುದಕ್ಕೆ ಹೊರಟಿದ್ದಾರೆ ಅದನ್ನು ಪ್ರತಿಭಟಿಸುತ್ತೇವೆ. ಇವರಿಗೆ ರಾಜ್ಯದ ಹಿತ ಮುಖ್ಯವಲ್ಲ.

(ಗೊಂದಲ)

ಅಧ್ಯಕ್ಷರು : ನಾನು ನಿಮ್ಮ ಎರಡೂ ಕಡೆಯವಾದ ಕೇಳಿದ್ದೇನೆ. ಮಾನ್ಯ ನಂಜೇಗೌಡರು ಖರ್ಗೆಯವರು ಮತ್ತು ವಿರೋಧಪಕ್ಷದ ನಾಯಕರು ಹೇಳಿದವಾದವನ್ನು ನಾನು ಕೇಳಿದೆ. ನನ್ನ ಮುಂದಿರುವ ಅಜೆಂಡದಂತೆ ನಾನು ಸದನ ನಡೆಸಬೇಕು ಅದಕ್ಕೆ ಸರ್ಕಾರವನ್ನು ಮತ್ತೊಮ್ಮೆ ಕೇಳುತ್ತೇನೆ, ಇನ್ನೂ ಒಂದೂವರೆ ತಿಂಗಳ ಅವಕಾಶ ಇದೆ ಎಂದು ಏನು ಸಲಹೆ ಇದೆ ಅದರ ಪ್ರಕಾರ ಸದನವನ್ನು ಒಂದು ವಾರ ಮುಂದೂಡಿ ಈ ವಿಚಾರ ತೆಗೆದುಕೊಳ್ಳಲು ತಯಾರಿದ್ದೀರ ಎಂದು ಕೇಳುತ್ತೇನೆ ಏಕೆಂದರೆ ಅವರ ಅಭಿಪ್ರಾಯ ಕೇಳಿದ ನಂತರ ನನ್ನ ನಿರ್ಣಯ ನಾನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ನಂಜೇಗೌಡರು ಇಟ್ಟಿರುವ ಸಲಹೆಯನ್ನು ತಾವೇನಾದರೂ ಪರಿಗಣಿಸುತ್ತೀರಾ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಅಜೆಂಡಾ ಪ್ರಕಾರ ಸದನ ನಡೆಯಲಿ, ಈಗಾಗಲೇ ತೀರ್ಮಾನವಾಗಿದೆ. ಇವತ್ತು ಅಪ್ರೊಪ್ರಿಯೇಷನ್ ಬಿಲ್ ಪಾಸ್ ಆಗಬೇಕು ಮತ್ತು ಎಲ್ಲಾ ಬೇಡಿಕೆಗಳು ಕೂಡ ಪಾಸಾಗಬೇಕಾಗಿದೆ. ನಾಳೆ ಅಪ್ರೊಪ್ರಿಯೇಷನ್ ಬಿಲ್ ಪಾಸಾಗುವುದು ಇದೆ. ಆದ್ದರಿಂದ ದಯಮಾಡಿ ಸದನ ಮುಂದೂಡುವುದು ಬೇಡ. ಎಲ್ಲ ಸದಸ್ಯರಲ್ಲಿ ನಾನು ಮನವಿ ಮಾಡುತ್ತೇನೆ. ನಾಳೆ ಮಾನ್ಯ ಮುಖ್ಯ ಮಂತ್ರಿಗಳು ಬಂದು ಹೇಳಿಕೆ ಕೊಡುತ್ತಾರೆ. ಇವತ್ತು ಎಲ್ಲ ಬೇಡಿಕೆಗಳ ಬಗ್ಗೆ ಚರ್ಚೆ ನಡೆಸೋಣ ಪಾಸ್ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

(ವಿರೋಧ ಪಕ್ಷದ ಎಲ್ಲ ಸದಸ್ಯರೂ ವೆಲ್‌ನಲ್ಲಿ ನಿಂತು ಮಾತನಾಡತೊಡಗಿದರು)

ಒಬ್ಬ ಮಾನ್ಯ ಸದಸ್ಯರು : ಅಲ್ಲಿ ಏನು ನಡೆದಿದೆ ಅದರ ಹೇಳಿಕೆಯನ್ನು ಕೊಡುತ್ತಾರೆ.

ಅಧ್ಯಕ್ಷರು : ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ನಾಚಿಕೆಗೇಡು ಧಿಕ್ಕಾರ ಎಂದು ವೆಲ್‌ನಲ್ಲಿದ್ದ ಸದಸ್ಯರು ಘೋಷಣೆ ಕೂಗತೊಡಗಿದರು)

ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಇಲಾಖಾ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

ಅಧ್ಯಕ್ಷರು : 1996-97ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ.